ಸಂಪಾದಕೀಯ



# ಹಣ : ಭಾರತದ ಆದರ್ಶವೇ?

‘‘ಅಲ್ಲಜ್ಜಾ, ಅಷ್ಟೊಂದು ಶ್ರೀಮಂತ – ಕೋಟ್ಯಂತರ ರೂಪಾಯಿ ಆಸ್ತಿ, ಹತ್ತಾರು ಉದ್ಯಮ, ಸಾವಿರಾರು ಎಕ್ರೆ ಜಮೀನು, ಲೆಕ್ಕವಿಲ್ಲದಷ್ಟು ಬಂಗಲೆ, ಕಾರುಗಳು, ಇಷ್ಟೆಲ್ಲ ಇದ್ದರೂ ಅವನಿಗೇನಾಯಿತು? ಇದ್ದಕಿದ್ದ ಹಾಗೆ ಆತ್ಮಹತ್ಯೆ ಮಾಡಿಕೊಂಡ ನಲ್ಲ! ಅಷ್ಟೊಂದು ಇರುವಾಗ, ಅವನಿಗೇನಂತೆ ಅಷ್ಟೊಂದು ಸಂಕಟ?...’’

ಯುವಕ ಮೊಮ್ಮಗನ ಮಾತಿಗೆ ಒಂದು ಕ್ಷಣ ಅಜ್ಜ ಏನೂ ಉತ್ತರ ಕೊಡಲಿಲ್ಲ. ಅಜ್ಜನ ಮುಖವನ್ನೇ ದಿಟ್ಟಿಸುತ್ತ ಮೊಮ್ಮಗ ಅವನ ಉತ್ತರಕ್ಕಾಗಿ ಕಾಯುತ್ತಿದ್ದ. ಒಂದು ಬಾರಿ ಗಂಟಲು ಸರಿ ಮಾಡಿಕೊಂಡು ಅಜ್ಜ ಹೇಳತೊಡಗಿದ:

‘‘ಇದೇ ರೀತಿ ಎಷ್ಟೊಂದು ಮಂದಿ ಕೋಟ್ಯಾಧೀಶರು ಮುಳುಗಿ ಹೋಗಿಲ್ಲ? ಎಷ್ಟೊಂದು ಮಂದಿ ರಾಜಂದಿರು, ಮಂತ್ರಿಗಳು, ಅಧಿಕಾರಿಗಳು ತಮ್ಮನ್ನೇ ತಾವು ಕೊಂದುಕೊಂಡಿಲ್ಲ? ಅವರು ತಮ್ಮ ಸಾಮ್ರಾಜ್ಯವನ್ನು ವಿಸ್ತರಿಸುತ್ತಲೇ ಹೋಗುತ್ತಾರೆ. ಕೊನೆಗೊಂದು ದಿನ ಇದೇ ಗತಿ ನೋಡು.’’

‘‘ಎಲ್ಲವನ್ನೂ ಬಿಟ್ಟು ಒಂದು ಸಣ್ಣ ಜಮೀನು, ಮನೆ ಇಟ್ಟುಕೊಂಡು ಸರಳವಾಗಿ ಬದುಕಬಾರದೇ ಇವರು?’’ ಮತ್ತೆ ಕೇಳಿದ ಹುಡುಗ. ‘‘ಅದು ಅಷ್ಟು ಸರಳವಲ್ಲ, ಮಗೂ. ಮನಸ್ಸು ಮಾಡಿದರೆ ಏನಿದೆಯೋ ಅದರಲ್ಲಿಯೇ ಸುಖವಾಗಿ ಬದುಕಬಹುದಿತ್ತು. ಆದರೆ ಅವರಿಗೆ ಅದು ಅರ್ಥವಾಗಬೇಕಲ್ಲ?’’ ಮೊಮ್ಮಗ ಕೇಳಿದ, ‘‘ಅಂದರೆ, ಎಂತಹ ಸಂಕಷ್ಟದಿಂದಲೂ ಪಾರಾಗಬಹುದು ಅಂತ ಹೇಳುತ್ತೀರಾ?’’ ಅಜ್ಜ ಉತ್ತರಿಸಿದ: ‘‘ಮತ್ತೇನು? ಗೊಂದಲವನ್ನು ಸೃಷ್ಟಿ ಮಾಡಿದ್ದು ಇವರೇ ಅಲ್ಲವೆ? ಏನೇನೋ ಮಾಡಿ ಸೊತ್ತು ಮಾಡಿದರು. ಎಷ್ಟಿದ್ದರೂ ಸಾಲದಾಯಿತು. ಕೊನೆಗೆ ಸಂಪತ್ತು ಎಷ್ಟು ಬೆಳೆಯಿತೆಂದರೆ, ಎಲ್ಲವನ್ನು ನಿಭಾಯಿಸಲಾಗದೆ, ಸಾಲ–ಬಡ್ಡಿ–ಚಕ್ರಬಡ್ಡಿ ಇದರ ಜೊತೆಗೆ ಏನೇನೋ ಏಳು–ಬೀಳು ಇವೆಲ್ಲ ನೆಮ್ಮದಿ–ಶಾಂತಿ ಕೆಡಿಸತೊಡಗಿದರೆ, ಅವನು ಏನನ್ನು ಪಡೆದ ಹಾಗಾಯಿತು? ಮನುಷ್ಯನ ದುರಂತವೆಂದರೆ ಇದೇ. ಎಲ್ಲವೂ ಯಾಕಾಗಿ? ‘ಬೇಕು ಬೇಕು’ ಎಂಬುದು ಎಲ್ಲಿಯ ತನಕ? ವಿವೇಚನೆ ಕಳೆದುಕೊಂಡವನಿಗೆ ವಿನಿಯೋಗ ಗೊತ್ತಾಗದು. ಬದುಕೇ ದುಸ್ತರವಾಗಿ ಹೋಗುತ್ತದೆ. ಅದಲ್ಲವೇ ಎಲ್ಲ ಅನಾಹುತಕ್ಕೆ ಕಾರಣ?’’ ಹುಡುಗ ಮತ್ತೆ ಕೇಳಿದ, ‘‘ಯಾಕೆ ನಾವು ವಿವೇಚನೆ ಕಳೆದುಕೊಳ್ಳುತ್ತೇವೆ? ವಿವರಿಸಿ ಹೇಳಿ ಅಜ್ಜಾ.’’

ಅಜ್ಜ ಒಂದು ಬಾರಿ ತತ್ತ್ವವಿಚಾರ ಹೇಳಲಾರಂಭಿಸಿದರೆ, ಅದು ಎಲ್ಲಿಂದ ಎಲ್ಲಿಗೋ ಹೋಗುತ್ತದೆ, ಹುಡುಗನಿಗೆ ಗೊತ್ತು. ಆದರೂ ಅವನು ಪ್ರಶ್ನೆ ಹಾಕಿದ್ದ. ಅಜ್ಜನ ತತ್ತ್ವ ನಿರರ್ಗಳವಾಗಿ ಸಾಗಿತು.

* * *

ಪ್ರತಿದಿನವೂ ನಾವು ಪತ್ರಿಕೆಗಳಲ್ಲಿ ಓದುತ್ತೇವೆ, ಸುದ್ದಿ ಮಾಧ್ಯಮಗಳಲ್ಲಿ ಕೇಳುತ್ತೇವೆ. ಯಾರೋ ಧನಿಕರು ಆತ್ಮಹತ್ಯೆ ಮಾಡಿಕೊಂಡರು, ಅಥವಾ ಕೋರ್ಟುಕಚೇರಿಗಳಲ್ಲಿ ಆಸ್ತಿಪಾಸ್ತಿ ಕಳೆದುಕೊಂಡು ಬೀದಿಪಾಲಾದರು, ಇಲ್ಲವೇ ಜಗಳ–ಹೊಡೆದಾಟಗಳಿಂದ ಬೇಸತ್ತು ಊರು ಬಿಟ್ಟು ಹೋದರು ಇತ್ಯಾದಿ. ಅನೇಕ ಬಾರಿ ನಮಗೆ ಆಶ್ಚರ್ಯವಾಗುತ್ತದೆ, ಇವರಿಗೇನಾಯಿತು? ಇಷ್ಟೆಲ್ಲ ಸಂಪತ್ತು ಇದ್ದರೂ ಏಕೆ ಹೀಗಾಗುತ್ತಾರೆ, ಸ್ವಲ್ಪವೂ ಅನುಭವಿಸುವ ಹಣೆಬರಹ ಇಲ್ಲವೇ ಎಂದು. ‘ಹೊರಗಿನಿಂದ ಕಂಡಾಗ ಭಾರೀ ಬಂಗಲೆ, ಒಳಗೆಲ್ಲ ಜೇಡರಬಲೆ, ಹುತ್ತ, ಹೆಗ್ಗಣ’ ಎಂದ ಹಾಗೆ, ಅನೇಕರ ಬದುಕು ಬಾಹ್ಯದಲ್ಲಿ ಸಂಪದ್ಭರಿತ; ಆದರೆ ಒಳಗಿನ ಕಥೆ ಅತ್ಯಂತ ದಾರುಣ. ನಗರ ಜೀವನದ, ಆಧುನಿಕ ವಾಣಿಜ್ಯ–ವ್ಯವಹಾರಗಳ ನಡುವೆ ಬದುಕುವವರ ಬವಣೆಗಳು ಒಂದೇ, ಎರಡೇ! ಸೊತ್ತಿಗಾಗಿ, ಹಣಕ್ಕಾಗಿ, ಅಧಿಕಾರ–ಅಂತಸ್ತುಗಳಿಗಾಗಿ ಹೋರಾಟ ನಡೆಸುತ್ತಲೇ ಸತ್ತು ಸುಣ್ಣವಾಗಿ ಹೋಗುವವರು. ಇವರ ಬದುಕಿನಲ್ಲಿ ‘ಯಾವುದಕ್ಕಾಗಿ ಇದೆಲ್ಲ?’ ಎಂಬ ಪ್ರಶ್ನೆ ಒಂದು ಸಲವಾದರೂ ಮೂಡುವುದಿಲ್ಲವೆ?

ಮಾನವನ ಜೀವನದಲ್ಲಿ ನಿಜಕ್ಕೂ ಅಗತ್ಯವಾದುದು ಏನು ಎಂಬುದನ್ನು ನಾವು ಅನೇಕ ಸಲ ಅರ್ಥಮಾಡಿಕೊಳ್ಳುವುದಿಲ್ಲ. ಅನ್ನ, ವಸತಿ, ಅಗತ್ಯದ ಸಾಮಗ್ರಿಗಳು ಎಲ್ಲರಿಗೂ ಅತ್ಯಗತ್ಯ. ಕೌಟುಂಬಿಕ ಜೀವನ ನಡೆಸುವುದಕ್ಕೆ ಆವಶ್ಯಕವಾದ ಇನ್ನು ಕೆಲವೊಂದು ಅಗತ್ಯಗಳೂ ಇವೆ. ಆದರೆ, ‘ನಮಗೇನು ಬೇಕು’ ಎಂಬುದಕ್ಕಿಂತ ‘ಎಷ್ಟನ್ನು ನಾನು ಗಳಿಸಬಲ್ಲೆ’ ಎಂಬುದು ಹೆಚ್ಚು ಪ್ರಧಾನವಾಯಿತೆ? ಅಗತ್ಯವಾದುದನ್ನು ಪೂರೈಸಿಕೊಂಡ ಬಳಿಕ

ಮನುಷ್ಯ ಅಲ್ಲಿಗೇ ನಿಲ್ಲುವುದಿಲ್ಲ. ಮನುಷ್ಯನಿಗೆ ಬುದ್ಧಿ ಕೈಕೊಡುವುದೇ ಇಲ್ಲಿ. ಹಣ, ಸೊತ್ತು ಕಲೆ ಹಾಕುತ್ತ ಹೋದಂತೆ ಮನುಷ್ಯನ ಆಸೆಯೂ ವಿಸ್ತರಿಸುತ್ತ ಹೋಗುತ್ತದೆ. 'ಓಹೋ, ನನಗೆ ಇಷ್ಟೆಲ್ಲ ಅಗತ್ಯವಿಲ್ಲ. ಅನಗತ್ಯ ಹಣವನ್ನು ಹೊಂದಿರುವುದು ಅನರ್ಥಕಾರಿ. ನೆಮ್ಮದಿ, ಆನಂದದ ಜೀವನವೇ ಮುಖ್ಯವಲ್ಲವೆ?' ಈ ಬಗೆಯ ಆಲೋಚನೆ ಸುಲಭವಾಗಿ ಬರಲಾರದು. ನಮ್ಮ ಬದುಕನ್ನು ದಾರುಣವಾಗಿಸುವ ಮನೋಭಾವ ಇದೇ. ಬುದ್ಧಿವಂತಿಕೆ, ವ್ಯವಹಾರ ದಕ್ಷತೆ ಇರುವವರು ಸಾಮ್ರಾಜ್ಯ ವಿಸ್ತರಿಸುತ್ತ ಹೋಗುತ್ತಾರೆ. ತಮ್ಮದೇ ಸೊತ್ತು, ಆಳುಕಾಳುಗಳು, ದೊಡ್ಡ ದೊಡ್ಡ ಉದ್ದಿಮೆ, ಬಂಡವಾಳ — ಇವೆಲ್ಲ ಬೆಳೆಯುತ್ತವೆ. ಇದಕ್ಕೆ ಸಮಾನಾಂತರವಾಗಿ ಹತ್ತು ಹಲವು ಆತಂಕ, ಗೊಂದಲಗಳೂ ಉಂಟಾಗುತ್ತವೆ — ಇವು ಅನಿವಾರ್ಯ. ಆದರೆ ಯಾರ ಬದುಕೂ ಹೀಗಿರಬೇಕಿಲ್ಲ. ಗಳಿಸಿದ್ದನ್ನು ಸಾರ್ಥಕಗೊಳಿಸುವ ಬಗೆ ಕೆಲವರಿಗೆ ಮಾತ್ರ ತಿಳಿದಿರುತ್ತದೆ. ಬದುಕಿನಲ್ಲಿ **ಎಷ್ಟು** ಗಳಿಸಿದ ಎಂಬುದು ಮುಖ್ಯವಲ್ಲ, ಆದರೆ **ಹೇಗೆ** ಬದುಕಿದ ಎಂಬುದು ಮುಖ್ಯ— ಇದೇ ಅವರು ಕಲಿತ ಪಾಠ.

ದೇಶದ ಪ್ರಗತಿ, ಬೆಳವಣಿಗೆ ಹಾಗೂ ಆರ್ಥಿಕ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಹಲವು ಮಂದಿ ಉದ್ದಿಮೆದಾರರ, ಶ್ರೀಮಂತರ ಕೊಡುಗೆಯಿಲ್ಲವೆ? ಒಟ್ಟು ಸಮಾಜದ ಸರಪಳಿಯಲ್ಲಿ ಅವರದೂ ಒಂದು ಮುಖ್ಯ ಪಾತ್ರವಿದೆಯಲ್ಲ — ಎಂದು ಕೆಲವರು ಪ್ರಶ್ನಿಸಬಹುದು. ನಿಜ, ಸಮಾಜ ಅಥವಾ ದೇಶ ತನ್ನದೇ ಆದ ಒಂದು ಗತಿಯಲ್ಲಿ ಸಾಗುತ್ತಿರುವಾಗ ಹಲವು ಸ್ತರದ, ಹಲವು ಹಂತಗಳ ವಹಿವಾಟುಗಳು ಅನಿವಾರ್ಯ. ಆದರೆ ಸಂಪತ್ತನ್ನು ಕೂಡಿಹಾಕುವ ಭರದಲ್ಲಿ ಉಳಿದೆಲ್ಲವನ್ನೂ ಮರೆಯುವ ಪ್ರವೃತ್ತಿ ಎಲ್ಲಿಂದ ಬರುತ್ತದೆ? ಹಣದ ಮುಂದೆ ಕುಟುಂಬವಿಲ್ಲ, ಸ್ನೇಹಿತರಿಲ್ಲ, ದೇಶವಿಲ್ಲ, ಸಮಾಜವಿಲ್ಲ – ಇನ್ನು ಧರ್ಮ, ನೀತಿ, ಸತ್ಯಗಳು ದೂರವೇ ಉಳಿದವು. ಭಾರತದ ಜೀವನಕ್ರಮ ಇದಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ; ಆದರೆ 'ಅನಿವಾರ್ಯ ಪರಿಸ್ಥಿತಿಯಲ್ಲಿ ನಾವೇನು ಮಾಡಬಲ್ಲೆವು?' ಎಂದು ಕೈಚೆಲ್ಲುವುದೇ ಅತ್ಯಂತ ಸುಲಭ. ಸಮಸ್ಯೆ ಮತ್ತೆ ಅದೇ ರೀತಿ ಮುಂದುವರಿಯುತ್ತದೆ — ಆರ್ಥಿಕ ಅಸಮಾನತೆ, ಬಡಜನರ ದುಃಸ್ಥಿತಿ, ಜನಸಾಮಾನ್ಯರ ಹಣಗಳಿಕೆಯ ಮಹತ್ವಾಕಾಂಕ್ಷೆ. ಇದರಾಚೆಗೆ ಏನೂ ಕಾಣಿಸದ ಪರಿಸ್ಥಿತಿ.

ಸ್ವಾಮಿ ವಿವೇಕಾನಂದರು ಹೇಳುತ್ತಾರೆ: ''ಪ್ರತಿಯೊಂದು ಜನಾಂಗದಲ್ಲಿಯೂ ಯಾವುದಾದರೊಂದು ಆದರ್ಶ ಅವರ ಬೆನ್ನೆಲುಬಿನಂತಿರುವುದನ್ನು ನಾನು ಕಂಡಿರುವೆನು. ಕೆಲವರಲ್ಲಿ ಅದೇ ರಾಜಕೀಯವಾಗಿದ್ದರೆ, ಕೆಲವರಲ್ಲಿ ಸಾಮಾಜಿಕ ಸಂಸ್ಕೃತಿಯಾಗಿರುತ್ತದೆ, ಮತ್ತೆ ಕೆಲವರಲ್ಲಿ ಅದೇ ಬೌದ್ಧಿಕ ಸಂಸ್ಕೃತಿಯಾಗಿರಬಹುದು. ಆದರೆ ನಮ್ಮ ಮಾತೃಭೂಮಿಯಾದ ಭರತಖಂಡದಲ್ಲಿ ಆ ಮೂಲ ತಳಹದಿಯೇ ಧರ್ಮ. ಧರ್ಮವೇ ದೇಶದ ಬೆನ್ನೆಲುಬು; ಧರ್ಮದ ಆಧಾರದ ಮೇಲೆಯೇ ಇಡೀ ರಾಷ್ಟ್ರಜೀವನದ ಸೌಧವು ಕಟ್ಟಲ್ಪಟ್ಟಿದೆ.'' *(ಸ್ವಾಮಿ ವಿವೇಕಾನಂದರ ಕೃತಿಶ್ರೇಣಿ, ಸಂ.೩, ಪು.೬೪)*

ನಮ್ಮ ದೇಶದ ಜೀವನ ಪದ್ಧತಿ ನಿರ್ಮಾಣವಾದುದು ಕೇವಲ ನೂರಿನ್ನೂರು ವರ್ಷಗಳಿಂದಲ್ಲ. ಕನಿಷ್ಠ ಐದು ಸಾವಿರ ವರ್ಷಗಳಿಂದ ಹರಿದುಬಂದ ಸಾಂಸ್ಕೃತಿಕ ಪರಂಪರೆ ಇಲ್ಲಿನದು. ಸಿನಿಕರು ಅಥವಾ ಆಧುನಿಕ ವಾಸ್ತವವಾದಿಗಳು ಮುಖ ಸಿಂಡರಿಸುತ್ತ, ''ಹಾಳುಪರಂಪರೆ! ಭಾರೀ ಕೊಚ್ಚಿಕೊಳ್ಳುವ ಇತಿಹಾಸ! ಈಗ ನಾವೇನಾಗಿದ್ದೇವೆ ನೋಡಿ. ಇಡೀ ಜಗತ್ತಿನ ವೇದಿಕೆಯಲ್ಲಿ ನಾವು ಕಾಲ ಕಸಕ್ಕಿಂತಲೂ ಕಡೆ!'' ಎಂದು ಗೋಗರೆಯುವುದನ್ನು ನಾವು ಸಾಮಾನ್ಯವಾಗಿ ನೋಡುತ್ತೇವೆ. ನಮ್ಮಲ್ಲಿರುವ ಅನರ್ಘ್ಯ ರತ್ನಗಳನ್ನು ಕಾಣುವ ಕಣ್ಣಿಲ್ಲದವರು, ಬೀದಿಬದಿಯ ಕೊಳೆ-ಕೊಚ್ಚೆಗಳನ್ನೇ ನೋಡುತ್ತಾರೆ; ಅದನ್ನೇ ಭಾರತವೆನ್ನುತ್ತಾರೆ. ಇನ್ನು ಅಮೆರಿಕ, ಯೂರೋಪ್ ಜಪಾನ್‌ಗಳೆಲ್ಲಲ್ಲ ಸುತ್ತಾಡಿ ಬಂದವರು ಬಾಹ್ಯಜಗತ್ತಿಗೆ ಮನಸೋತು, 'ಭಾರತದಲ್ಲಿರುವಷ್ಟು ಗಲೀಜು ಜಗತ್ತಿನಲ್ಲಿ ಇನ್ನೆಲ್ಲೂ ಇಲ್ಲ' ವೆಂದು ಸಾರಿಬಿಡುತ್ತಾರೆ. ಬಾಹ್ಯ ಸ್ವಚ್ಛತೆಯೊಂದೇ ಜೀವನಪದ್ಧತಿಯ ಮಾನದಂಡವಲ್ಲ – ಅದು ನಾಗರಿಕ ಬದುಕಿಗೆ ಅತ್ಯಂತ ಅಗತ್ಯವಾದುದೇನೋ ನಿಜ; ಆದರೆ ಅದರಾಚೆಗೆ ಇನ್ನೂ ಅನೇಕ ಸಂಗತಿಗಳಿವೆ. ಭಾರತ ಅದನ್ನು ಸಾವಿರಾರು ವರ್ಷಗಳಿಂದಲೇ ಕಂಡುಕೊಂಡಿದೆ. ಶಾಂತಿ, ಆನಂದ, ತೃಪ್ತಿ, ನೆಮ್ಮದಿಗಳಿರುವುದು ಬಾಹ್ಯ ಸಂಪತ್ತಿನಲ್ಲಲ್ಲ, ಅದು ನಮ್ಮ ಅಂತರ್ಯದಲ್ಲಿದೆ. ಆಸೆಯ ಬೆನ್ನಟ್ಟಿ ಹೋಗದೆ, ಆತ್ಮದ ಬೆನ್ನಟ್ಟಿ ಹೋಗು — ನಿನಗೆ ಶಾಂತಿ, ಆನಂದ ಲಭಿಸುತ್ತದೆ. ಇದು ಭಾರತ ಕಲಿಸಿಕೊಡುವ ಆದರ್ಶ.

ಹುಟ್ಟಿದ ಮಗುವಿಗೆ ಬಾಲ್ಯದಿಂದಲೇ 'ಡಾಕ್ಟರ್ ಆಗಬೇಕು', 'ಇಂಜಿನಿಯರ್ ಆಗಬೇಕು', 'ಅಮೇರಿಕಾಗೆ ಹೋಗಬೇಕು' ಎಂಬ ಆದರ್ಶಗಳನ್ನು ಬಿತ್ತುತ್ತೇವೆ. ಮಗು ಕೂಡ ಬೆಳೆಯುತ್ತ ಕೋಟ್ಯಾಧೀಶನಾಗುವ ಕನಸನ್ನು ಕಾಣುತ್ತದೆ. ಬದುಕಿನಲ್ಲಿ ಬೇರೆ ಯಾವ ಆದರ್ಶವನ್ನೂ ಕಲಿಯದವರು, ಅನೇಕ ಹೊಡೆತಗಳನ್ನು ತಿಂದ ನಂತರ ಮೌಲ್ಯ, ಧರ್ಮ, ಅಧ್ಯಾತ್ಮಗಳತ್ತ ತಿರುಗುತ್ತಾರೆ. ಆದರೆ ಅಷ್ಟರಲ್ಲಿ ಕಲಿಯುವ ಪರಿಸ್ಥಿತಿ ಮೀರಿಹೋಗಿರುತ್ತದೆ. ಎಲ್ಲೆಡೆ 'ನನಗೆ ಬೇಕು', 'ನಾನು ಇದನ್ನು ಪಡೆಯಬೇಕು' ಎನ್ನುತ್ತ ಬರೀ 'ಬೇಕು'ಗಳನ್ನೇ ಸಾಧಿಸುವ ಗುರಿಯನ್ನು ಇಟ್ಟುಕೊಂಡರೆ, ಜೀವನದುದ್ದಕ್ಕೂ 'ಗಳಿಸುವ' ಹಾಗೂ ಬೇಕಾದುದನ್ನು ಬೇಟೆಯಾಡುತ್ತ ಹೋಗುವ ಪ್ರವೃತ್ತಿಯೊಂದೇ ನಮ್ಮ ಜೀವನವಾಗುವುದಿಲ್ಲವೆ? ನಾವು 'ಸಾಕು' ಎನ್ನುವುದು ಯಾವಾಗ? ನಮಗೆಷ್ಟು ಬೇಕೋ ಅದನ್ನರಿತು, 'ಇಷ್ಟಿದ್ದರೆ ನನಗೆ ಸಾಕು. ನಾನಿನ್ನು ಕೂಡಿಹಾಕುವುದಿಲ್ಲ' ಎಂದು ತೃಪ್ತಿಯನ್ನು ಕಾಣುವುದು ಯಾವಾಗ?

ಭಾರತೀಯ ಜೀವನಕ್ರಮದಲ್ಲಿ ಬಾಲ್ಯದಿಂದಲೇ ಮಕ್ಕಳಿಗೆ ಸಂಯಮ, ನಿಗ್ರಹ, ಇತಿಮಿತಿ ಮೊದಲಾದ ಶಿಸ್ತುಗಳನ್ನು ಕಲಿಸ

ಲಾಗುತ್ತದೆ. 'ಸತ್ಯಂ ವದ, ಧರ್ಮಂ ಚರ'– ಇದು ಉಪನಿಷತ್ತುಗಳಲ್ಲಿ ಶಿಷ್ಯನಿಗೆ ಗುರು ಕಲಿಸುವ ಪಾಠ. ಸತ್ಯವಂತನಾದವನು ಧರ್ಮದ ಮಾರ್ಗವನ್ನು ಬಿಟ್ಟುಹೋಗುವುದಿಲ್ಲ. 'ಮಾ ಗೃಧಃ ಕಸ್ಯ ಸ್ವಿದ್ಧನಂ'– ಇನ್ನೊಬ್ಬರ ಸೊತ್ತಿಗಾಗಿ ಆಸೆಪಡಬೇಡ' ಎಂದು ನೈತಿಕ ಪಾಠವನ್ನೂ ಉಪನಿಷತ್ತು ಕಲಿಸುವುದು. ಶಮ–ದಮಾದಿ ಷಟ್ಕಸಂಪತ್ತಿ, ಇಂದ್ರಿಯನಿಗ್ರಹ — ಇವೆಲ್ಲ ಕೇವಲ ಯೋಗಿಗಳಿಗೆ ಮಾತ್ರ ಸೀಮಿತವಾದ ಶಿಸ್ತುಗಳಲ್ಲ; ಸಮಾಜದಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ಹಂತದಲ್ಲಿ ಇವನ್ನು ಪಾಲಿಸಬೇಕಾಗುತ್ತದೆ. ಎಲ್ಲಕ್ಕಿಂತ ಹೆಚ್ಚಾಗಿ ತ್ಯಾಗ, ಸೇವೆ, ನಿಸ್ವಾರ್ಥಭಾವ ಇವುಗಳನ್ನು ಪಾಲಿಸುವವನಿಗೆ ಮಾತ್ರ ಶಾಂತಿ ಎಂದು ನಮ್ಮ ಶಾಸ್ತ್ರಗಳು ಸಾರುತ್ತವೆ. ಶ್ರುತಿ, ಸ್ಮೃತಿಗಳು ಸಾರುವ ಆದರ್ಶಜೀವನವನ್ನು ಜನಸಾಮಾನ್ಯರಿಗೆ ಕಲಿಸಿಕೊಟ್ಟ ನಮ್ಮ ದೇಶದ ಸಾಧು–ಸಂತರುಗಳು, ಇಲ್ಲಿನ ಸಾಮಾಜಿಕ ಜೀವನದ ಮೇಲೆ ಅತಿಹೆಚ್ಚಿನ ಪ್ರಭಾವ ಬೀರಿದರು. ಇಂದು ಮತ್ತೆ ಆಧುನಿಕ ಸಮಾಜವು ಭಾರತದ ಈ ಮೂಲ ಆದರ್ಶದೆಡೆಗೆ ಮರಳುವ ಅಗತ್ಯವಿದೆ. ವಿಜ್ಞಾನ, ತಂತ್ರಜ್ಞಾನದ ನೆಪದಲ್ಲಿ ಮತ್ತೆ ಮರುಕಳಿಸಿರುವ ಪಾಶ್ಚಾತ್ಯ ಜೀವನ ಶೈಲಿಯು ಭಾರತೀಯವಾದುದನ್ನೆಲ್ಲ ತಿರಸ್ಕರಿಸುವ ಚಾಳಿಗೆ ಒಳಗಾಗಿದೆ. ಅದಕ್ಕೆ ಬದಲಾಗಿ, ನಮ್ಮ ಪರಂಪರೆಯ ಶ್ರೇಷ್ಠ ಸತ್ವವನ್ನು ಅರಿತುಕೊಳ್ಳಬೇಕು; ಅದರ ಆಧಾರದಲ್ಲೇ ಹೊಸ ಬದುಕನ್ನು ರೂಪಿಸಿಕೊಳ್ಳಬೇಕು. ಮನುಷ್ಯ ಎಷ್ಟೇ ಆಧುನಿಕನಾಗಲಿ, ಸಮತೂಕದ ವಿವೇಚನೆ ಮಾತ್ರವೇ ಅವನ ಬದುಕನ್ನು ಶ್ರೇಷ್ಠವನ್ನಾಗಿಸುವುದು. ಅಂಥ ವಿವೇಚನೆಯ ಕೊರತೆ ಇಂದು ದಟ್ಟವಾಗಿ ಕಾಣಿಸುತ್ತಿದೆ. ಸುಖಭೋಗದ, ಇಂದ್ರಿಯ ನಿಗ್ರಹವಿಲ್ಲದ, ಸಂಪತ್ತಿನ ಬೆನ್ನಟ್ಟಿಹೋಗುವ ಪ್ರವೃತ್ತಿಗೆ ಇದೇ ಪ್ರಧಾನ ಕಾರಣ.

ಅನೇಕ ಬಾರಿ ನಾವು ಜೀವನದಲ್ಲಿ ಎಂಥ ಮೋಸಕ್ಕೆ ಒಳಗಾಗುತ್ತೇವೆ ಎಂದರೆ, ನಮಗೆ ಬೇಕಾಗಿರುವ ವಸ್ತುವನ್ನು ಬೆನ್ನಟ್ಟಿಹೋಗುವ ಭರದಲ್ಲಿ, ನಾವು ಈಗಾಗಲೇ ಹೊಂದಿರುವ ಅಮೂಲ್ಯ ವಸ್ತುವನ್ನು ಮರೆತುಬಿಡುತ್ತೇವೆ. ಈ ಭೂಪ್ರಪಂಚವನ್ನೇ ಗಮನಿಸೋಣ. ಮಾನವನ ಜೀವನಕ್ಕೆ ಇಷ್ಟೊಂದು ಅನುಕೂಲಕರವಾದ ಯಾವುದೇ ತಾಣ ಜಗತ್ತಿನಲ್ಲಿಲ್ಲ. ನೀರು, ಗಾಳಿ, ಬೆಳಕು, ಆಹಾರಗಳಿಂದ ಕಂಗೊಳಿಸುವ, ಜೀವವೈವಿಧ್ಯದಿಂದ ನಳನಳಿಸುವ ಈ ಭೂಮಿ ಅದೆಷ್ಟು ಅಮೂಲ್ಯವಾದದು! ಮುಂದೊಂದು ದಿನ ಭೂಮಿಯ ನೀರೆಲ್ಲ ಬತ್ತಿಹೋದರೆ, ಶುದ್ಧ ಗಾಳಿಯೆಲ್ಲ ವಿಷಪೂರಿತವಾಗಿ ಬಿಟ್ಟರೆ ನಾವೆಲ್ಲಿಗೆ ಓಡಿಹೋಗಬೇಕು? ಆಹಾರವೇ ಸಿಗದೆ ಹೋದರೆ ಮಾನವನ ಗತಿಯೇನು? ಇಂಥ ವಿಪರೀತ ಅವಸ್ಥೆ ನಮಗೆಂದಿಗೂ ಬಾರದಿರಲಿ. ಆದರೆ ಹಾಗಾಗದಂತೆ ನೋಡಿಕೊಳ್ಳುವ, ಭೂಮಿಯನ್ನು ಪವಿತ್ರ ಜನನಿಯೆಂದು ಭಾವಿಸಿ ರಕ್ಷಿಸುವ ಹೊಣೆ ನಮ್ಮದಲ್ಲವೆ? ಮಾನವನಿಗೆ ಲಭಿಸಿರುವ ಇದಕ್ಕಿಂತ ದೊಡ್ಡ ಸಂಪತ್ತು ಇನ್ನಾವುದಿದೆ? ಇಷ್ಟು ಸುಂದರವಾದ ಪೃಥ್ವಿಗೆ ಸುಂದರ ಹಾರ ತೊಡಿಸಿದಂತೆ ಮಾನವನು ಬದುಕಬೇಕು. ಪರಸ್ಪರ ಜಗಳ, ಗೊಂದಲ, ಯುದ್ಧ, ಕ್ರೌರ್ಯ, ಶೋಷಣೆಗಳಿಂದ ಮಾನವನ ಶಾಂತಿ, ನೆಮ್ಮದಿ ಕದಡಿಹೋಗಿದೆ. ಇದನ್ನು ಸರಿಪಡಿಸಲು ಮಾನವನ ಜೀವನಶೈಲಿಯೇ ಬದಲಾಗಬೇಕು.

ಶ್ರೀರಾಮಕೃಷ್ಣರು 'ಭಗವಂತ ಎರಡು ಬಾರಿ ನಗುತ್ತಾನೆ' ಎಂದು ಹೇಳಿದ ಕಥೆಯನ್ನಿಲ್ಲಿ ನೆನಪಿಸಿಕೊಳ್ಳಬೇಕು:

ಭಗವಂತ ಈ ಎರಡು ಸಂದರ್ಭಗಳಲ್ಲಿ ನಗುತ್ತಾನೆ. ಕವಿರಾಜ (ವೈದ್ಯ) ರೋಗಿಯ ತಾಯಿಗೆ, 'ತಾಯೆ, ನಿನಗೇಕೆ ಹೆದರಿಕೆ? ನಿನ್ನ ಮಗನನ್ನು ನಾನು ಗುಣಪಡಿಸಿಬಿಡುತ್ತೇನೆ' ಎಂಬುದಾಗಿ ಹೇಳಿದಾಗ ಒಮ್ಮೆ ನಗುತ್ತಾನೆ. ಆಗ ಭಗವಂತ ಅಂದುಕೊಳ್ಳುತ್ತಾನೆ: ನಾನು ಈತನನ್ನು ಸಾಯಿಸುವುದರಲ್ಲಿದ್ದೇನೆ. ಈ ಪಂಡಿತ ಹೇಳುತ್ತಾ ಇದ್ದಾನಲ್ಲ, 'ನಾನು ಬದುಕಿಸಿಕೊಡುತ್ತೇನೆ ಅಂತ!' ಕವಿರಾಜ ಭಾವಿಸುತ್ತಾನೆ, ತಾನು ಕರ್ತ ಎಂಬುದಾಗಿ, ಆತ ಮರೆತುಬಿಟ್ಟಿದ್ದಾನೆ, ಭಗವಂತನೇ ಕರ್ತ ಎಂಬುದನ್ನು. ಬಳಿಕ ಅಣ್ಣತಮ್ಮಂದಿರು ಹಗ್ಗ ಹಿಡಿದುಕೊಂಡು ಜಮೀನು ಭಾಗ ಮಾಡಿಕೊಳ್ಳುವಾಗ 'ಈ ಭಾಗ ನನ್ನದು, ಆ ಭಾಗ ನಿನ್ನದು' ಎಂದು ಹೇಳುತ್ತಾರಲ್ಲ, ಆಗ ಮತ್ತೆ ಭಗವಂತ ನಗುತ್ತಾನೆ. ಆಗ ಆತ ಅಂದುಕೊಳ್ಳುತ್ತಾನೆ: 'ಏನಿದು! ಈ ಬ್ರಹ್ಮಾಂಡವೇ ನನ್ನದು. ಅಂಥಾದ್ದರಲ್ಲಿ ಇವರು ಹೇಳುತ್ತಾ ಇದ್ದಾರಲ್ಲ, ''ಈ ಭಾಗ ನನ್ನದು, ಆ ಭಾಗ ನಿನ್ನದು'' ಎಂಬುದಾಗಿ!' *(ಶ್ರೀರಾಮಕೃಷ್ಣ ವಚನವೇದ, ಭಾಗ ೧, ಪು. ३೮)*

ನಾವು ಮರೆತಿರುವುದು ಇದನ್ನು. ಪ್ರಪಂಚದ ಎಲ್ಲ ಆಗುಹೋಗುಗಳು ನಮ್ಮ ಕೈಯಲ್ಲಿಲ್ಲ ಎಂಬುದನ್ನು.

ಇದೇ ರೀತಿ, ಎಲ್ಲ ಮನುಷ್ಯನು ಬಯಸುವ, ಪ್ರತಿಯೊಬ್ಬನೂ ಹಾರೈಸುವ ಸುಖವು ಪರಸ್ಪರ ಸಹಬಾಳ್ವೆಯ, ನಂಬಿಕೆ–ವಿಶ್ವಾಸದ, ಒಬ್ಬರನ್ನೊಬ್ಬರು ಗೌರವಿಸುವ ಜೀವನಶೈಲಿಯಲ್ಲಿದೆ. ಒಂದೇ ದಿನದಲ್ಲಿ ಎಲ್ಲರೂ ಧರ್ಮಾತ್ಮರಾಗಲಾರರು, ನಿಜ. ಯಾವ ಸಮಾಜವೂ ಸಂಪೂರ್ಣ ಕೆಡುಕು, ಕ್ರೌರ್ಯ, ವಂಚನೆಗಳಿಂದ ಮುಕ್ತವಾಗಲಾರದು. ಆದರೆ ಭಾರತದ ಜನ ಸಾಮಾನ್ಯರ ಸಹಜಪ್ರವೃತ್ತಿ ಧಾರ್ಮಿಕವೂ ಆಧ್ಯಾತ್ಮಿಕವೂ ಆಗಬೇಕು; ಅದರಿಂದ ಮಾತ್ರವೇ ಭಾರತ ತನ್ನ ನಿಜವಾದ ಆದರ್ಶವನ್ನು ಮತ್ತೆ ಜೀವನದಲ್ಲಿ ಕಂಡುಕೊಳ್ಳಬಲ್ಲುದು. ❖

**ಆಗಸ್ಟ್ ತಿಂಗಳ ಕಾರ್ಯಕ್ರಮಗಳು**

| | | |
|---|---|---|
| ೦೮ | ಸೋಮವಾರ | ಏಕಾದಶಿ |
| ೧೨ | ಶುಕ್ರವಾರ | ಸ್ವಾಮಿ ನಿರಂಜನಾನಂದ ಜಯಂತಿ |
| ೧೯ | ಶುಕ್ರವಾರ | ಶ್ರೀ ಕೃಷ್ಣ ಜನ್ಮಾಷ್ಟಮಿ |
| ೨೨ | ಸೋಮವಾರ | ಏಕಾದಶಿ |
| ೨೬ | ಶುಕ್ರವಾರ | ಸ್ವಾಮಿ ಅದ್ವೈತಾನಂದ ಜಯಂತಿ |
| ३೧ | ಬುಧವಾರ | ಶ್ರೀ ಗಣೇಶ ಚತುರ್ಥಿ |